# ಮೆದುಳು ಜ್ವರ, ಇರಲಿ ಎಚ್ಚರ

ಸೋಂಕು ಮುಖಾಂತರ ಮೆದುಳು ಜ್ವರ ಬಂದ ರೋಗಿಗೆ ತೀವ್ರ ನಿಗಾ ಘಟಕದಲ್ಲಿ ಇರಿಸಿ ಚಿಕಿತ್ಸೆ ನೀಡ ಬೇಕಾಗುತ್ತದೆ.



**■ ಡಾ. ವಿನಯ ಶ್ರೀನಿವಾಸ್**

ಕಳೆದ ಕೆಲ ದಿನಗಳಿಂದ ಪತ್ರಿಕೆಗಳಲ್ಲಿ ಪ್ರಕಟವಾದ ಸುದ್ದಿ ಭಯ ಹುಟ್ಟಿಸುವಂಥದ್ದು. ಅಸ್ಸಾಂನಲ್ಲಿ ಮಕ್ಕಳು ಮೆದುಳು ಜ್ವರದಿಂದ ಅಸು ನೀಗಿದ ಈ ಸುದ್ದಿ ನಮ್ಮ ಮಕ್ಕಳನ್ನು ಎಚ್ಚರಿಕೆಯಿಂದ ಕಾಪಾಡಬೇಕಾದ ಮುನ್ಸೂಚನೆ ನೀಡಿದಂತಿದೆ.

ಅಸ್ಸಾಂನಲ್ಲಿ ಈ ವರ್ಷದ ಏಪ್ರಿಲ್‌ನಿಂದ ಜೂನ್‌ವರೆಗೆ ಇಪ್ಪತ್ತಕ್ಕೂ ಹೆಚ್ಚು ಮಕ್ಕಳ ಸಾವಿಗೆ ಕಾರಣವಾದ ಮೆದುಳು ಜ್ವರಕ್ಕೆ ಜಪಾನೀಸ್ ಮೆದುಳು ಜ್ವರದ ವೈರಾಣುವೇ ಕಾರಣ ಎಂದು ಧೃಡಪಟ್ಟಿದೆ. ಇದು ಕ್ಯುಲೆಕ್ಸ್ ಎಂಬ ಬಗೆಯ ಸೊಳ್ಳೆ ಕಚ್ಚುವುದರಿಂದ ಹರಡುತ್ತದೆ. ಈ ಬಗೆಯ ಸೊಳ್ಳೆಯು ಬತ್ತದ ಗದ್ದೆ ಹಾಗೂ ಸಸ್ಯರಾಶಿಯನ್ನು ಹೊಂದಿದ ಹಳ್ಳ ಕೆರೆಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

ಶರೀರದ ಎಲ್ಲ ಅಂಗಾಂಗಗಳ ಕಾರ್ಯವೈಖರಿಯನ್ನು ಆದೇಶಿಸುವ ಹಾಗೂ ನಿಯಂತ್ರಿಸುವ ಪ್ರಮುಖ ಅಂಗ ಮೆದುಳು. ಅದರ ರಚನೆ ಅಥವಾ ಕಾರ್ಯಕ್ಷಮತೆಯಲ್ಲಿ ಸ್ವಲ್ಪ ವ್ಯತ್ಯಾಸವಾದರೂ ಅದು ದೇಹದ ಇತರ ಅಂಗಾಂಗಗಳ ಮೇಲೆ ಪರಿಣಾಮ ಬೀರುತ್ತದೆ. ಇತರೆ ಅಂಗಗಳಂತೆ ಮೆದುಳಿಗೂ ಸೋಂಕು ತಗಲಬಹುದು. ಆ ರೀತಿ ಸೋಂಕು ತಗುಲಿದಾಗ ಉಂಟಾಗುವ ಮೆದುಳಿನ ಉರಿಯೂತವನ್ನು ಮೆದುಳು ಜ್ವರ ಎನ್ನುತ್ತೇವೆ. ಇದು ಒಮ್ಮೊಮ್ಮೆ ಕೇವಲ ಮೆದುಳಿಗಷ್ಟೇ ಸೀಮಿತವಾಗಿರಬಹುದು. ಇನ್ನು ಕೆಲವೊಮ್ಮೆ ಮೆದುಳಿನ ಜೊತೆಯಲ್ಲಿ ಅದರ ಹೊರ ಕವಚಗಳು ಹಾಗೂ ಬೆನ್ನುಹುರಿಗೂ ವಿಸ್ತರಿಸಬಹುದು. ಇನ್ನು ಕೆಲವು ಸಂದರ್ಭಗಳಲ್ಲಿ ಮೆದುಳಿನ ರಚನೆಯಲ್ಲಿ ಏನೂ ವ್ಯತ್ಯಾಸವಾಗದೇ ಅಂದರೆ ಮೆದುಳಿನಲ್ಲಿ ಉರಿಯೂತವಿಲ್ಲದೆ ಕೇವಲ ಅದರ ಕಾರ್ಯಕ್ಷಮತೆಯಲ್ಲಿ ಏರುಪೇರಾಗುವುದಿದೆ. ಅದನ್ನು ಮೆದುಳಿನ ಕಾಯಿಲೆ (ಎನ್ಸೆಫಲೋಪತಿ) ಎನ್ನುತ್ತಾರೆ.

## ಕಾರಣಗಳೇನು?

ವಿವಿಧ ಬಗೆಯ ವೈರಾಣುಗಳು ಜಪಾನೀಸ್ ಮೆದುಳು ಜ್ವರದ ವೈರಾಣು, ದಡಾರ, ಮಂಪ್ಸ್, ವೆಸ್ಟ್ ನೈಲ್, ಎಚ್ ಐ ವಿ ವೈರಾಣು, ಡೆಂಗಿ ವೈರಾಣು ಮೊದಲಾದವು ಅಣುಜೀವಿಗಳಾದ ಮೈಕೋಬ್ಯಾಕ್ಟೀರಿಯಂ ಟ್ಯುಬರ್ಕ್ಯುಲೋಸಿಸ್, ಲಿಸ್ಟೀರಿಯ. ಇತರ ಬಗೆಯ ಸೂಕ್ಷ್ಮಾಣುಗಳಾದ ರಿಕೆಟ್ಸಿಯೆ ಕ್ರಿಪ್ಟೋಕಾಕಸ್ ಮೊದಲಾದ ಶಿಲೀಂದ್ರಗಳ ಸೋಂಕು. ಪರಾವಲಂಬಿ ಸೂಕ್ಷ್ಮಾಣುಗಳಾದ ಟಾಕ್ಸೋಪ್ಲಾಸ್ಮೋಸಿಸ್ ಗೊಂಡೈನಿಂದ ಸೋಂಕು.

## ಗುಣಲಕ್ಷಣಗಳೇನು?

ಮೆದುಳು ಜ್ವರದ ಗುಣಲಕ್ಷಣಗಳು ಸಾಮಾನ್ಯವಾಗಿ ದಿಢೀರ್ ಆಗಿ ಕಾಣಿಸಿಕೊಳ್ಳುತ್ತವೆ. ಈ ಗುಣಲಕ್ಷಣಗಳು ಉರಿಯೂತದ ತೀವ್ರತೆ, ವ್ಯಕ್ತಿಯ ರೋಗ ನಿರೋಧಕ ಶಕ್ತಿ, ಉರಿಯೂತಕ್ಕೊಳಗಾದ ಮೆದುಳಿನ ನಿರ್ದಿಷ್ಟ ಭಾಗ ಹಾಗೂ ಮೆದುಳಿನಲ್ಲಿ ಉಂಟಾದ ಊತದ ಪ್ರಮಾಣದ ಮೇಲೆ ಅವಲಂಬಿತವಾಗಿರುತ್ತದೆ.

ತೀವ್ರತರವಾದ ಜ್ವರ, ವಾಂತಿ, ತಲೆನೋವು, ಮಾನಸಿಕ ಗೊಂದಲ, ಅರೆ ಪ್ರಜ್ಞಾಸ್ಥಿತಿ, ದೃಷ್ಟಿಯಲ್ಲಿ ತೊಂದರೆ, ಕಾಲುಗಳು ಬಲಹೀನವಾಗುವುದು, ಕಣ್ಣುಗಳ ಮೇಲಿನ ರೆಪ್ಪೆಗಳು ಬಲಹೀನವಾಗಿ ಕೆಳಕ್ಕೆ ವಾಲುವುದು, ಮಾತುಗಳಲ್ಲಿ ವ್ಯತ್ಯಾಸ ಅಥವಾ ತೊದಲುವಿಕೆ, ಕೈ ಕಾಲುಗಳಲ್ಲಿ ದೋಷಪೂರಿತ ಚಲನೆ, ಉಸಿರಾಟದಲ್ಲಿ ಏರುಪೇರು, ಹೃದಯದ ಬಡಿತದಲ್ಲಿ ವ್ಯತ್ಯಾಸ, ಶರೀರದ ಅಸಮತೋಲನ, ಅಪಸ್ಮಾರದಂತಹ ಗುಣಲಕ್ಷಣಗಳು.

## ನಿರ್ವಹಣೆ ಹಾಗೂ ಚಿಕಿತ್ಸೆ ಹೇಗೆ?

ಮೆದುಳು ಜ್ವರ ಒಂದು ವೈದ್ಯಕೀಯ ತುರ್ತು ಪರಿಸ್ಥಿತಿ. ಸಾಮಾನ್ಯವಾಗಿ ಮೆದುಳು ಜ್ವರದ ಗುಣಲಕ್ಷಣಗಳಿರುವ ರೋಗಿಯನ್ನು ತೀವ್ರ ನಿಗಾ ಘಟಕದಲ್ಲಿ ಇರಿಸಿ ಚಿಕಿತ್ಸೆ ನೀಡಬೇಕಾಗುತ್ತದೆ. ಮೊದಲನೆಯದಾಗಿ ವ್ಯಕ್ತಿಯ ಉಸಿರಾಟ ಹಾಗೂ ಹೃದಯದ ಕಾರ್ಯಕ್ಕೆ ಬೆಂಬಲ ಚಿಕಿತ್ಸೆ ಬೇಕಾಗುತ್ತದೆ. ನಂತರ ಏರಿದ ದೇಹದ ತಾಪಮಾನವನ್ನು ಕಡಿಮೆ ಮಾಡಲು, ಏರಿದ ಮೆದುಳಿನ ಊತವನ್ನು ಇಳಿಸಲು, ದೇಹದ ದ್ರವಾಂಶ ಹಾಗೂ ಇತರ ಅಂಶಗಳನ್ನು ಸರಿಯಾದ ಪ್ರಮಾಣದಲ್ಲಿ ಕಾಯ್ದಿರಿಸಿಕೊಳ್ಳಲು ಚಿಕಿತ್ಸೆ ಬೇಕಾಗುತ್ತದೆ. ಅಪಸ್ಮಾರದಂತಹ ಗುಣಲಕ್ಷಣಗಳು ಕಂಡಾಗ ಅದರ ನಿಯಂತ್ರಣ ಮತ್ತು ವ್ಯಕ್ತಿಯ ರಕ್ತದೊತ್ತಡದ ನಿಯಂತ್ರಣವೂ ಮುಖ್ಯ. ಇದರ ಜೊತೆಯಲ್ಲಿ ಮೆದುಳಿನ ಉರಿಯೂತಕ್ಕೆ ಕಾರಣವಾಗಿರಬಹುದಾದ ಸೂಕ್ಷ್ಮಾಣುಗಳ ಪತ್ತೆಗಾಗಿ ರಕ್ತದ ಪರೀಕ್ಷೆ ಮಾಡಬೇಕಾಗುತ್ತದೆ. ಅಂತೆಯೇ ಮೆದುಳಿನ ಹೊರಭಾಗದ ಕವಚಗಳಲ್ಲಿ ಪರಿಚಲಿಸುವ ದ್ರವವನ್ನು ಬೆನ್ನಿನ ಭಾಗದ ಮೂಲಕ ತೆಗೆದು ಪರೀಕ್ಷೆಗೆ ಒಳಪಡಿಸಬೇಕಾಗುತ್ತದೆ. ಕಾರಣವಾದ ಸೂಕ್ಷ್ಮಾಣುವಿನ ಬಗ್ಗೆ ಪತ್ತೆಯಾದಾಗ ನಿರ್ದಿಷ್ಟ ಆ್ಯಂಟಿಬಯಾಟಿಕ್ ಔಷಧವನ್ನು ಕೊಡಬೇಕಾಗುತ್ತದೆ. ■